ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-12.

ಸಂಖ್ಯೆ: ಪಪೂಶಿಇ/ಶೈ.ಶಾ- 05/ಪಮಕಾವಾಭಾ/2013-14 ದಿನಾಂಕ: -08-2015

## ತಿದ್ದೋಲೆ

ವಿಷಯ: ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳ ಬೋಧನಾ ಅವಧಿ ಮರು ನಿಗದಿಪಡಿಸುವ ಕುರಿತು.

ಉಲ್ಲೇಖ: ಇದೇ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 23-06-2015.

******

ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಪ್ರಾಯೋಗಿಕ ವಿಜ್ಞಾನ ಮತ್ತು ಗಣಿತಶಾಸ್ತ್ರ ವಿಷಯಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಲ್ಲಿ ವಾರದಲ್ಲಿ 4 ಗಂಟೆಗಳ ಪಠ್ಯ ಬೋಧನೆ ಮಾಡುವುದು. ಉಳಿದಂತೆ ವಾರದಲ್ಲಿ ಒಂದು ಗಂಟೆಯನ್ನು ವಿದ್ಯಾರ್ಥಿಗಳಲ್ಲಿ ವಾಕ್ ಹಾಗೂ ಬರವಣಿಗೆ ಕೌಶಲ್ಯ ಹೆಚ್ಚಿಸುವುದು, ಆಕಾಶವಾಣಿ, ದೂರದರ್ಶನದ ಚಂದನ ಪ್ರಸಾರ ವಾಹಿನಿಗಳಲ್ಲಿ ವಿದ್ಯಾರ್ಥಿಗಳಿಂದ ಕಾರ್ಯಕ್ರಮ, ಶೈಕ್ಷಣಿಕ ಚಟುವಟಿಕೆ, ಉದಾ: ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ, ಪ್ರಾಚ್ಯ ವಸ್ತು ಸಂಗ್ರಹಾಲಯ, ವಿಜ್ಞಾನ ಕೇಂದ್ರ, ಮುಂತಾದ ಸ್ಥಳಗಳಿಗೆ ಒಂದು ದಿನದ ಪ್ರವಾಸ ಇತ್ಯಾದಿಗಳಿಗೆ ನಿಗದಿಪಡಿಸಿ, ಉಪನ್ಯಾಸಕರು ಮೇಲು ಉಸ್ತುವಾರಿ ವಹಿಸಲು ಪ್ರಾಂಶುಪಾಲರು ಕ್ರಮ ವಹಿಸಲು ಈ ಮೂಲಕ ಸೂಚಿಸಿದೆ. ಪ್ರತಿ ತಿಂಗಳಿನ ಸಿಬ್ಬಂದಿ ಸಭೆಯಲ್ಲಿ ಇದನ್ನು ಪ್ರಾಂಶುಪಾಲರು ಪರಿಶೀಲಿಸುವುದು. ವಿದ್ಯಾರ್ಥಿಗಳು ಬೇರೆ ಸ್ಥಳಕ್ಕೆ ಭೇಟಿ ನೀಡಿದ್ದರೆ, ಅವರಿಂದ ಅವರ ಕೈಬರಹದಲ್ಲಿ ಅವರ ಸಂಕ್ಷಿಪ್ತ ವರದಿ ಹಾಗೂ ಅವರ ಅನಿಸಿಕೆಗಳು, ಉಪನ್ಯಾಸಕರುಗಳು ಎಲ್ಲಾ ಚಟುವಟಿಕೆಗಳ ಕುರಿತು, ಪ್ರತಿ ತಿಂಗಳು ವರದಿ ನೀಡಬೇಕು. ಸದರಿ ವರದಿಯ ನಮೂನೆಯ ಪ್ರತಿ ಲಗತ್ತಿಸಿದೆ.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1) ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
2) ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳ ಮೂಲಕ ಮುಂದಿನ ಕ್ರಮಕ್ಕಾಗಿ.
3) ಜಂಟಿ ನಿರ್ದೇಶಕರು (ಆಡಳಿತ/ ಪರೀಕ್ಷೆ/ ಮಾನ್ಯತೆ/ಆರ್.ಐ.ಡಿ.ಎಫ್) ಪ.ಪೂ.ಶಿ.ಇ-ಮಾಹಿತಿಗಾಗಿ.
4) ಸಹಾಯಕ ನಿರ್ದೇಶಕರು, ಇ-ಆಡಳಿತ, ಪ.ಪೂ.ಶಿ.ಇ ಅಂತರ್ಜಾಲದಲ್ಲಿ ಅಳವಡಿಸಲು

# ನಮೂನೆ

| Sl No | | | |
|---|---|---|---|
| 1 | Name of Acitivity | | |
| 2 | Date of Goal | | |
| 3 | Opinion of Students | 1)<br>2)<br>3) | |
| 4 | Principal/Lecturers opinion | | |
| 5 | visit Details If any, | Place:<br>Date:<br>Duration:<br>Mode of conveyance | |
| 6 | Benefit gained | | |